**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗಕ್ಕೆ 2017-18ನೇ ಪ್ರಥಮ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** (1) ಸರ್ಕಾರಿ ಆದೇಶ ಸಂಖ್ಯೆ:ಪಿಡಿ 32 ಎಸ್‌ಎಸ್‌ಎಂ 2017, ದಿನಾಂಕ:07.04.2017
(2) ಸರ್ಕಾರಿ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2017, ದಿನಾಂಕ:05.04.2017.
(3) ಕಾರ್ಯದರ್ಶಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ ಇವರ ಪತ್ರ ಸಂಖ್ಯೆ:ಬಪ್ರಮಂ/ಚಿ/ಲೆ.ಶಾ/ಅನುದಾನ ಬಿಡುಗಡೆ/2017-18/569, ದಿನಾಂಕ:10.07.2017

**ಪ್ರಸ್ತಾವನೆ:**

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 2017-18ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.5000.00 ಲಕ್ಷಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿ ಒದಗಿಸಲಾಗಿದೆ:-

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | ಮೊತ್ತ (ರೂ ಲಕ್ಷಗಳಲ್ಲಿ) |
|---|---|---|
| 1. | 2515-00-103-0-03-101 (ಸಹಾಯಾನುದಾನ) | 53.00 |
| 2. | 4515-00-800-0-04-132 (ಬಂಡವಾಳ ವೆಚ್ಚ) | 3741.00 |
| 3. | 4515-00-800-0-04-422(ಪರಿಶಿಷ್ಟ ಜಾತಿ ಉಪ ಯೋಜನೆ) | 858.00 |
| 4. | 4515-00-800-0-04-423 (ಗಿರಿಜನ ಉಪ ಯೋಜನೆ) | 348.00 |
| | ಒಟ್ಟು | **5000.00** |

ಮೇಲೆ ಓದಲಾದ ಪತ್ರದಲ್ಲಿ ಕಾರ್ಯದರ್ಶಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ ಇವರು ಮಂಡಳಿಗೆ 2017-18ನೇ ಸಾಲಿನ ಪ್ರಥಮ ಕಂತಿನ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಮಂಡಳಿಯ ಮುಂದುವರೆದ ಕಾಮಗಾರಿಗಳ ಬಿಲ್ಲುಗಳನ್ನು ಇತ್ಯರ್ಥಪಡಿಸಲು ಮತ್ತು ಆಡಳಿತ ವೆಚ್ಚ ಭರಿಸಲು ಅನುಕೂಲವಾಗುವಂತೆ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗಕ್ಕೆ 2017-18ನೇ ಸಾಲಿನ ಪ್ರಥಮ ಕಂತಿನ ಅನುದಾನ ರೂ.1250.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆ. ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ:ಯೋಇ 61 ಪಿಟಿಪಿ 2017, ಬೆಂಗಳೂರು, ದಿನಾಂಕ:26.07.2017**

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗಕ್ಕೆ 2017-18ನೇ ಸಾಲಿನ ಪ್ರಥಮ ಕಂತಿನ ಅನುದಾನ ರೂ.1250.00 ಲಕ್ಷ (ಒಂದು ಸಾವಿರದ ಇನ್ನೂರೈವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿ ಬಿಡುಗಡೆ ಮಾಡಿದೆ.

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | ಮೊತ್ತ (ರೂ ಲಕ್ಷಗಳಲ್ಲಿ) |
|---|---|---|
| 1. | 2515-00-103-0-03-101 (ಸಹಾಯಾನುದಾನ) | 13.25 |
| 2. | 4515-00-800-0-04-132 (ಬಂಡವಾಳ ವೆಚ್ಚ) | 935.25 |
| 3. | 4515-00-800-0-04-422(ಪರಿಶಿಷ್ಟ ಜಾತಿ ಉಪ ಯೋಜನೆ) | 214.50 |
| 4. | 4515-00-800-0-04-423 (ಗಿರಿಜನ ಉಪಯೋಜನೆ) | 87.00 |
| | ಒಟ್ಟು | **1250.00** |

26/7/17

**ಷರತ್ತುಗಳು:**

1. ಬಿಡುಗಡೆಯಾದ ಈ ಅನುದಾನವನ್ನು ಮಂಡಳಿಯ ಬ್ಯಾಂಕ್ ಖಾತೆಗೆ ಜಮೆ ಮಾಡಿ, ನಂತರ ಅವಶ್ಯಕತೆಗನುಗುಣವಾಗಿ ಪ್ರಸಕ್ತ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳಿಗೆ ಮಾತ್ರ ನಿಯಮಾನುಸಾರ ಖರ್ಚು ಮಾಡತಕ್ಕದು.

2. ಮಂಡಳಿಯ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಅನುದಾನ ಮತ್ತು ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನದ ಶೇಕಡ 75 ರಷ್ಟನ್ನು ವೆಚ್ಚ ಭರಿಸಿ, ಹಣಬಳಕೆ ಪ್ರಮಾಣಪತ್ರದೊಂದಿಗೆ 2ನೇ ಕಂತಿನ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಪಿಎಫ್ 01 ಟಿಎಫ್‌ಪಿ 2017, ದಿನಾಂಕ:05.04.2017ರಲ್ಲಿ ಸರ್ಕಾರದ ಆಡಳಿತ ಇಲಾಖೆಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
26/7/17
**(ಹೆಚ್.ಸಿ. ಹರ್ಷರಾಣಿ)**
ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್-5)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ
O/C 26/7

*ಇವರಿಗೆ:*

1. ಪ್ರಧಾನ ಮಹಾಲೇಖಪಾಲರು(ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು.
3. ಮಹಾಲೇಖಪಾಲರು (ಲೆಕ್ಕಪತ್ರ)/(ಲೆಕ್ಕ ಪರಿಶೋಧನಾ ಮತ್ತು 1&2) ಕರ್ನಾಟಕ, ಬೆಂಗಳೂರು-01.
4. ಕಾರ್ಯದರ್ಶಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ತಮಟಕಲ್ಲು ರಸ್ತೆ, ಚಿತ್ರದುರ್ಗ.
5. ಜಿಲ್ಲಾ ಖಜಾನಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
6. ನಿರ್ದೇಶಕರು/ಉಪನಿರ್ದೇಶಕರು, ಖಜಾನೆ ನೆಟ್‌ವರ್ಕ್, ಮ್ಯಾನೇಜ್‌ಮೆಂಟ್ ಖನಿಜಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-5), ವಿಧಾನ ಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸರ್ಕಾರದ ಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ, ಯೋಜನಾ ಇಲಾಖೆ.